# D.El.Ed

# Question Paper
















Code No.: 442-EK

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಮಲ್ಲೇಶ್ವರಂ, ಬೆಂಗಳೂರು-560003

KARNATAKA SCHOOL EXAMINATION AND ASSESSMENT BOARD

Malleshwaram, Bengaluru-560003

ದ್ವಿತೀಯ ವರ್ಷದ ಡಿ.ಎಲ್.ಇಡಿ. ಪೂರಕ ಪರೀಕ್ಷೆ, ಡಿಸೆಂಬರ್, 2022

**Second Year D.El.Ed. Supplementary Examination, December, 2022**

| | | |
|---|---|---|
| **Subject** / ವಿಷಯ | : | **Education as Practice**<br>**ರೂಢಿಯಾಗಿ ಶಿಕ್ಷಣ** |
| **Date of Exam.** / ಪರೀಕ್ಷೆಯ ದಿನಾಂಕ | : | 13.12.2022 |
| **Maximum Marks** / ಗರಿಷ್ಠ ಅಂಕಗಳು | : | 60 |
| **Duration of Exam** / ಪರೀಕ್ಷೆ ಅವಧಿ | : | 3 hours / 3 ಗಂಟೆಗಳು |
| **Time** / ಸಮಯ | : | 2.00 PM to 5.00 PM. |

**ಅಭ್ಯರ್ಥಿಗಳಿಗೆ ಸಾಮಾನ್ಯ ಸೂಚನೆಗಳು / *General Instructions to the Candidates :***

1. ಅಭ್ಯರ್ಥಿಗಳು ತನ್ನ ನೋಂದಣಿ ಸಂಖ್ಯೆಯನ್ನು ಪ್ರವೇಶ ಪತ್ರದಲ್ಲಿ ಮುದ್ರಿಸಿರುವಂತೆಯೇ ಉತ್ತರ-ಪುಸ್ತಿಕೆಯಲ್ಲಿ ನೀಡಿರುವ ನಿಗದಿತ ಸ್ಥಳದಲ್ಲಿ ಸಷ್ಟವಾಗಿ ಬರೆಯಿರಿ.
   Candidates should write their Register Number on the Answer Booklet as printed in their admission ticket.
2. ಅಭ್ಯರ್ಥಿಗಳು ಹೆಚ್ಚುವರಿ ಉತ್ತರ ಹಾಳೆಗಳನ್ನು ಪಡೆದಲ್ಲಿ ಉತ್ತರ ಹಾಳೆಗಳ ಮುಖಪುಟದ ಮೇಲಿನ ನಿಗದಿತ ಸ್ಥಳದಲ್ಲಿ ಮುಖ್ಯ ಉತ್ತರ-ಪುಸ್ತಿಕೆಯ ಕ್ರಮ ಸಂಖ್ಯೆಯನ್ನು ಬರೆಯತಕ್ಕದ್ದು.
   Candidates should write their Main Answer Booklet Number on the additional answer sheets in the space provided.
3. ಈ ಪ್ರಶ್ನೆಪತ್ರಿಕೆಯು ಆಂಗ್ಲ ಮತ್ತು ಕನ್ನಡ ಮಾಧ್ಯಮಗಳಲ್ಲಿ ಮುದ್ರಿತವಾಗಿದೆ. ಒಂದು ವೇಳೆ ಭಾಷಾಂತರಗೊಂಡ ಪ್ರಶ್ನೆಪತ್ರಿಕೆಯಲ್ಲಿ ವ್ಯತ್ಯಾಸ / ಸಂದೇಹವಿದ್ದಲ್ಲಿ ಆಂಗ್ಲ ಮಾಧ್ಯಮದಲ್ಲಿರುವ ಪ್ರಶ್ನೆಗಳು ಅಂತಿಮವೆಂದು ಪರಿಗಣಿಸತಕ್ಕದ್ದು.
   This Question Paper is printed in English and Kannada mediums. In case of any discrepancies/ doubts in the translated language, question in English medium is considered as valid and final.
4. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
   This Question Paper has been sealed by reverse jacket. You have to cut on the right side to open the Question Paper at the time of commencement of the examination. Check whether all the pages of the Question Paper are intact.
5. ಅಭ್ಯರ್ಥಿಗಳು ನಿಗದಿಪಡಿಸಿದ ಸ್ಥಳವನ್ನು ಹೊರತುಪಡಿಸಿ ಇನ್ನಿತರೇ ಯಾವುದೇ ಪುಟಗಳಲ್ಲಿ ನೋಂದಣಿ ಸಂಖ್ಯೆ, ಗುರುತು ಹಾಗೂ ಚಿಹ್ನೆ ಇನ್ನಿತರೆ ಯಾವುದೇ ಮಾಹಿತಿಗಳನ್ನು ಬರೆಯಬಾರದು. ಒಂದು ವೇಳೆ, ಈ ಬಗೆಯ ಯಾವುದೇ ಮಾಹಿತಿಗಳನ್ನು ಉತ್ತರ-ಪುಸ್ತಿಕೆಯಲ್ಲಿ ಬರೆದ ಪಕ್ಷದಲ್ಲಿ ಅಂತಹ ಉತ್ತರ-ಪುಸ್ತಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.
   Candidates should not write Register Number, mark, sign or any other information in the Answer Booklet except in the specified place. In case, it is found any information in the sheets of the answer scripts such answer scripts will not be considered for evaluation.
6. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಹಾಗೂ ಪರೀಕ್ಷಾ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಪರೀಕ್ಷಾ ನಿಯಮಾನುಸಾರ ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಯ ಉತ್ತರ-ಪುಸ್ತಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.
   Candidate found to be indulging in malpractice during examination and violating examination instructions, action will be taken against such candidate as per the examination rules and his/ her Answer Booklet will not be considered for evaluation.
7. ಉತ್ತರ ಬರೆಯಲು ಕಪ್ಪು / ನೀಲಿ ಶಾಯಿಯ ಬಾಲ್ ಪಾಯಿಂಟ್ ಪೆನ್ ಮಾತ್ರ ಉಪಯೋಗಿಸತಕ್ಕದ್ದು.
   Use black / blue ball point pen only to write the answers.



institutes.aglasem.com
aglasem.com

(ಕನ್ನಡ ಮಾಧ್ಯಮ)

## ಭಾಗ – I

ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯು ಕಡ್ಡಾಯ. $1 \times 10 = 10$

1. ಅಟ್ಟಣೆ/ಆಸರೆಯು **(scaffolding)** ಒಳಗೊಂಡಿರುವ ಅಂಶಗಳು

**(I)** ಸಹಾಯವನ್ನು ತಡೆಯುವುದು

**(II)** ಕಲಿಕಾರ್ಥಿಗೆ ಅಗತ್ಯವಿದ್ದಾಗ ಮಾತ್ರ ಶಿಕ್ಷಕರ ಸಹಾಯ

**(III)** ವಿದ್ಯಾರ್ಥಿಗಳಿಗೆ ಸ್ವ–ಯೋಜನಾ ಕಾರ್ಯಗಳಿಗೆ ಅನುವು ಮಾಡಿಕೊಡುವುದು

(A) I ಮತ್ತು II (B) II ಮತ್ತು III

(C) I ಮತ್ತು III (D) I, II ಮತ್ತು III

2. ಓಹ್, ಇದು ತುಂಬಾ ಬಿಸಿ ಮುಟ್ಟಿದರೆ ಕೈಸುಟ್ಟು ಹೋಗುತ್ತೆ ! ಈ ಹೇಳಿಕೆ ಕೆಳಗಿನ ಕ್ರಿಯೆಯನ್ನು ಸೂಚಿಸುತ್ತದೆ.

(A) ಸ್ವ – ನಿಯಂತ್ರಣ (B) ಸ್ವ – ಸೂಚನೆ

(C) ಸ್ವ – ಕಲಿಕೆ (D) ಸ್ವ – ಮೌಲ್ಯಮಾಪನ

3. ಶಿಕ್ಷಕರೊಬ್ಬರು ಕಲಿಕಾ ಸಂಪನ್ಮೂಲವನ್ನು ನಿರ್ಧರಿಸುವಾಗ ಆಡುಭಾಷೆ ಹಾಗೂ ಸಾಂಸ್ಕೃತಿಕ ಬಹುತ್ವಕ್ಕೆ ಒತ್ತು ನೀಡುತ್ತಾರೆ. ಈ ಕೆಳಗಿನ ಅಂಶವನ್ನು ಇದು ಸೂಚಿಸುತ್ತದೆ.

(A) ಸುಲಭ ಸಾಧ್ಯತೆ

(B) ಬೋಧನಾ ವಿಧಾನ ಸಂಬಂಧಿ ವಿಚಾರಗಳು

(C) ಪರಿಸರ ಸಂಬಂಧಿ ವಿಚಾರಗಳು

(D) ಸಾಮಾಜಿಕ ವಿಚಾರಗಳು

4. 'ಆಯ್ಕೆ ಸಿದ್ಧಾಂತ'ದ ಪ್ರತಿಪಾದಕ

(A) ಬ್ರೂನರ್ (B) ವೈಗಾಟ್ಸ್‌ಕಿ

(C) ವಿಲಿಯಂ ಗ್ಲೇಸರ್ (D) ರೋಜರ್ ಬೈಬಿ



institutes.aglasem.com

aglasem.com

5. ಹೇಳಿಕೆ – **I:** ಸಂಪನ್ಮೂಲಗಳನ್ನು ಗುರ್ತಿಸಿ ಸಾಮಗ್ರಿಗಳನ್ನು ಸೃಷ್ಟಿಸುವ ಅಥವಾ ಸಂಗ್ರಹಿಸುವುದನ್ನು ವಿಶ್ಲೇಷಣೆ ಎನ್ನುವರು.

ಹೇಳಿಕೆ – **II:** ಬೋಧನಾ ಗುರಿಗಳು ಮತ್ತು ಉದ್ದೇಶಗಳನ್ನು ವ್ಯಾಖ್ಯಾನಿಸಿ ಕಲಿಕಾ ಪರಿಸರವನ್ನು ಗುರ್ತಿಸುವುದನ್ನು ವಿನ್ಯಾಸ ಎನ್ನುವರು.

(A) ಹೇಳಿಕೆ – I ಸರಿ. II ತಪ್ಪು
(B) ಹೇಳಿಕೆ – II ಸರಿ. I ತಪ್ಪು
(C) ಹೇಳಿಕೆ – I ಮತ್ತು II ಸರಿ
(D) ಹೇಳಿಕೆ – I ಮತ್ತು II ತಪ್ಪು

6. ಒಂದು ಕಲಿಕಾ ಸಂಪನ್ಮೂಲವು ಒಳಗೊಂಡಿರದ ಅಂಶ.

(A) ಸ್ಪಷ್ಟತೆ
(B) ದ್ವಂದ್ವಾರ್ಥತೆ
(C) ದೀರ್ಘಕಾಲ ಬಾಳಿಕೆ
(D) ಸಾಂದರ್ಭಿಕತೆ

7. ನಿರ್ಧಾರ ಕೈಗೊಳ್ಳುವ ಮುನ್ನ ತಾನು ಏನು ಮಾಡಬಲ್ಲೆ ಅಥವಾ ಮಾಡಲಾರೆ ಎನ್ನುವುದರ ವಾಸ್ತವಿಕ ವಿಶ್ಲೇಷಣೆ ಮಾಡುವ ಸಾಮರ್ಥ್ಯ

(A) ಸ್ವ–ಅರಿವು
(B) ಮಾನಸಿಕ ಸ್ಥಿರತೆ
(C) ತಾರ್ಕಿಕ ಚಿಂತನೆ
(D) ವೈಚಾರಿಕತೆ

8. ಒಳಗೊಳ್ಳುವ ಕಲಿಕಾ–ಸ್ನೇಹಿ ತರಗತಿಯು ಈ ಕೆಳಗಿನ ಅಂಶಗಳನ್ನು ಆಧರಿಸಿದೆ.

**(I)** ಸ್ನೇಹ – ಸೌಹಾರ್ದಯುತ ಸಂಬಂಧ

**(II)** ಮಕ್ಕಳ ಅನುಭವಗಳಿಗೆ ಪ್ರಾಧಾನ್ಯತೆ

**(III)** ಉಪದೇಶಾತ್ಮಕ ಸಂವಹನ

**(IV)** ನೈಜ ಮೌಲ್ಯಂಕನ

ಇವುಗಳಲ್ಲಿ

(A) I ಮತ್ತು II
(B) I ಮತ್ತು III
(C) I, II ಮತ್ತು III
(D) I, II ಮತ್ತು IV



institutes.aglasem.com
aglasem.com

9. 'ನಮ್ಯತೆ' ಎಂದರೆ

(A) ಇತರರ ಅಭಿಪ್ರಾಯಗಳಿಂದ ಪ್ರಭಾವಗೊಳ್ಳದೆಯೇ ಯೋಜಿಸುವ ಸಾಮರ್ಥ್ಯ.

(B) ಚಿಂತನೆಯಲ್ಲಿ ಯಾವುದೇ ತಡೆಯಿಲ್ಲದೆ ಅನೇಕ ವಿಚಾರಗಳನ್ನು ಹೇಳುವ ಸಾಮರ್ಥ್ಯ.

(C) ಯೋಚಿಸುವಾಗ ದೃಷ್ಟಿಕೋನಗಳನ್ನು ಬದಲಾಯಿಸಿಕೊಂಡು ಎಷ್ಟು ಸಾಧ್ಯವೋ ಅಷ್ಟು ವಿಚಾರಗಳನ್ನು ಸೃಜಿಸುವ ಸಾಮರ್ಥ್ಯ.

(D) ಒಂದು ವಿಷಯದ ಬಗ್ಗೆ ಬೇರೆ ಬೇರೆ ರೀತಿಗಳಲ್ಲಿ ಯೋಚಿಸುವ ಸಾಮರ್ಥ್ಯ.

10. 'ರಚನವಾದಿ ಶಿಕ್ಷಣ ಪದ್ಧತಿಯು ಒಳಗೊಂಡಿರದ ಅಂಶ

(A) ನಮ್ಯತೆ

(B) ಮುಕ್ತತೆ

(C) ಸೃಜನಶೀಲ ಚಿಂತನೆ

(D) ತಪ್ಪುಗಳನ್ನು ಮಾಡಲು ಅವಕಾಶವಿಲ್ಲದಿರುವುದು

## ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ. $2 \times 5 = 10$

11. ಒಂದು ಸಂಸ್ಥೆಯಾಗಿ ಶಾಲೆಯು ಒಳಗೊಂಡಿರುವ ಎರಡು ಸಾಮಾನ್ಯ ಲಕ್ಷಣಗಳನ್ನು ತಿಳಿಸಿ.

12. ಸ್ವಾವಲೋಕನ ಬೋಧನೆಯ ಎರಡು ಮೂಲತತ್ವಗಳನ್ನು ಪಟ್ಟಿಮಾಡಿ.

13. ಯಶ್‌ಪಾಲ್ ಸಮಿತಿಯ "ಹೊರೆ ರಹಿತ ಕಲಿಕೆ" ಎಂಬ ಪರಿಕಲ್ಪನೆಯನ್ನು ಸಂಕ್ಷಿಪ್ತವಾಗಿ ವಿವರಿಸಿ.

14. ಭಾಷೆಯು ಜ್ಞಾನಾತ್ಮಕ ವಿಕಾಸವನ್ನು ರೂಪಿಸುತ್ತದೆ. ಈ ಹೇಳಿಕೆಯನ್ನು ಸಮರ್ಥಿಸಿ.

15. ಸೃಜನಶೀಲ ವ್ಯಕ್ತಿಗಳ ನಾಲ್ಕು ಗುಣಲಕ್ಷಣಗಳನ್ನು ಪಟ್ಟಿಮಾಡಿ.

16. ನಿಕಟ ಸೇವಾ ತರಬೇತಿಯಲ್ಲಿ ನೀವು ಬಳಸಿದ ನಾಲ್ಕು ಮೌಖಿಕ ಮೌಲ್ಯಾಂಕನ ಸಾಧನಗಳನ್ನು ಬರೆಯಿರಿ.

17. ಜೋಡಿ ಗುಂಪು ಚಟುವಟಿಕೆಗಳಲ್ಲಿ ಬಳಸಬಹುದಾದ ಪ್ರಮುಖ ಸಂಪನ್ಮೂಲಗಳನ್ನು ತಿಳಿಸಿ.

18. ಪರಿಣಾಮಕಾರಿ ಸಂವಹನ ಕೌಶಲದ ಸೂಕ್ತವಾದ ಎರಡು ಘಟಕಾಂಶಗಳನ್ನು ಸೂಚಿಸಿ.



institutes.aglasem.com
aglasem.com

## ಭಾಗ – III

ಈ ಕೆಳಗಿನ ಪ್ರಶ್ನೆಗಳಿಗೆ (a) ಅಥವಾ (b) ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟಕ್ಕೆ ಮೀರದಂತೆ ಉತ್ತರಿಸಿ. $5 \times 8 = 40$

19. (a) ನಿಮ್ಮ ತರಗತಿ ಬೋಧನೆ ಕಲಿಕೆಯಲ್ಲಿ 'ಸ್ಕ್ಯಾಫೋಲ್ಡಿಂಗ್'ನ್ನು ವಿವಿಧ ರೀತಿಯಲ್ಲಿ ಹೇಗೆ ಬಳಸಿಕೊಳ್ಳುವಿರಿ?

ಅಥವಾ

(b) ನೀವು 'ಬಹುಕಾರ್ಯ ಚತುರಶಿಕ್ಷಕ'ರಾಗಿ ರೂಪುಗೊಳ್ಳಲು ಅಳವಡಿಸಿಕೊಳ್ಳುವ ತಂತ್ರಗಳೇನು?

20. (a) ಶಿಶು ಕೇಂದ್ರಿತ ಪದ್ಧತಿ ಹಾಗೂ ಸಾಂಪ್ರದಾಯಿಕ ಪದ್ಧತಿಗಳಿಗಿರುವ ವ್ಯತ್ಯಾಸಗಳನ್ನು ತಿಳಿಸಿ.

ಅಥವಾ

(b) ವಿಮರ್ಶಾತ್ಮಕ ಶಿಕ್ಷಣ ಪದ್ಧತಿಯು ಒಳಗೊಂಡಿರುವ ಸೂಕ್ತವಾದ ಐದು ಅಂಶಗಳನ್ನು ತಿಳಿಸಿ.

21. (a) 'ರಚನೆಗಳು ಮತ್ತು ಪ್ರಕ್ರಿಯೆ'ಗಳನ್ನು ರೂಪಿಸುವ ಮೂಲಕ ಶಾಲೆಯು ತನ್ನ ಉದ್ದೇಶವನ್ನು ಸಾಧಿಸುತ್ತದೆ.' ಈ ಹೇಳಿಕೆಯನ್ನು ವಿಶ್ಲೇಷಿಸಿ.

ಅಥವಾ

(b) ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ವ್ಯಕ್ತಿ ಮತ್ತು ಸಾಮಗ್ರಿಗಳನ್ನು ಸಂಘಟಿಸುವ ಅಗತ್ಯವಿದೆ.' ವಿಶ್ಲೇಷಿಸಿ.

22. (a) ರಾಬರ್ಟ್‌ಗ್ಯಾನೆಯವರ ಬೋಧನಾ ವಿನ್ಯಾಸದ ಮಾದರಿಯು ಒಳಗೊಂಡಿರುವ ಪ್ರಕ್ರಿಯೆಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ.

ಅಥವಾ

(b) 'ಸ್ಥಾನ ಚಿತ್ರಣ ಪತ್ರಿಕೆ'ಯು ತರಗತಿ ಸಂವಹನವನ್ನು ಮಾರ್ಗದರ್ಶಿಸುವ ಮೂಲ ತತ್ವಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.



institutes.aglasem.com
aglasem.com

23. (a) 5E ಮಾದರಿಯ 'ಅನ್ವೇಷಣೆ' ಮತ್ತು 'ವಿವರಣೆ' ಹಂತಗಳಿಗೆ ಸಂಬಂಧಿಸಿದ ಪಾಠಯೋಜನೆ ತಯಾರಿಸಿ.

ಅಥವಾ

(b) ನೀವು ತಯಾರಿಸಿದ ಪಾಠಯೋಜನೆಯಿಂದ ಒಂದು ಬೋಧನಾ ಸಂಗತಿಯನ್ನು ಆಯ್ದು ಅದನ್ನು ವಿನ್ಯಾಸಗೊಳಿಸಿ.

24. (a) ವಿದ್ಯಾರ್ಥಿಗಳಲ್ಲಿ ಕಲೆ ಮತ್ತು ಸೌಂದರ್ಯಪ್ರಜ್ಞೆ ಬೆಳೆಸುವ ಸಾಧನಗಳಾಗಿ ಸಂಪನ್ಮೂಲಗಳು ಹೇಗೆ ಸಹಾಯಕವಾಗಿವೆ ಎಂಬುದನ್ನು ಉದಾಹರಣೆಗಳೊಂದಿಗೆ ತಿಳಿಸಿ.

ಅಥವಾ

(b) ಮಕ್ಕಳ ಕಲಿಕೆಯನ್ನು ಅನುಕೂಲಿಸಲು ನೀವು ಮಾನವ ಸಂಪನ್ಮೂಲಗಳನ್ನು ಹೇಗೆ ಬಳಸಿಕೊಳ್ಳುವಿರಿ?

25. (a) ವಿಮರ್ಶಾತ್ಮಕ ಚಿಂತಕರು ಹೊಂದಿರಬೇಕಾದ ಗುಣಲಕ್ಷಣಗಳನ್ನು ತಿಳಿಸಿ.

ಅಥವಾ

(b) 'ಸ್ವ–ಅರಿವನ್ನು' ಹೆಚ್ಚಿಸಲು ವಿದ್ಯಾರ್ಥಿಗಳಿಗೆ ನೀಡಬಹುದಾದ ಐದು ಸಲಹೆಗಳನ್ನು ಸೂಚಿಸಿ.

26. (a) ಒತ್ತಡ ನಿಭಾಯಿಸುವ ಕೌಶಲದ ಯಾವುದಾದರೂ ಐದು ಘಟಕಾಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

ಅಥವಾ

(b) ನಿತ್ಯಜೀವನದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ನೀವು ಬಳಸಬಹುದಾದ ಐದು ತಂತ್ರಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.



institutes.aglasem.com

aglasem.com

(English Medium)

## Part - I

**Four choices have been given for each of the following questions. Choose the most appropriate answer and write in the Answer Book. Every question carry one mark. All the questions are compulsory.** $1 \times 10 = 10$

1. **Components of scaffoldings are**

   **(I) No support**

   **(II) Teacher provides help only when the learner needs it.**

   **(III) Allows students to do tasks and projects on their own - of these,**

   (A) I and II (B) II and III

   (C) I and III (D) I, II and III

2. **"Ooh, this is so hot, I will burn if I touch! This statement indicates the following process**

   (A) Self-Regulate (B) Self- Instruct

   (C) Self-learning (D) Self-Evaluate

3. **While selecting the learning resources a teacher stresses dialects and Cultural plurality. This indicates the following aspect.**

   (A) Easy availability (B) Methodology related Issues

   (C) Environment related Issues (D) Social Issues

4. **Choice Theory was profounded by**

   (A) Bruner (B) Vygotsky

   (C) William Glasser (D) Roger Bybee



institutes.aglasem.com

aglasem.com

5. **Statement I : Creating resources and identifying materials is known as analysis.**

   **Statement II: Defining Instructional goals and objectives and identifying learning environment is known as design.**

   (A) Statement I is correct, II incorrect

   (B) Statement II is correct, I is incorrect

   (C) Both statements I and II are correct

   (D) Both statements I and II are incorrect.

6. **An aspect (component) that should not be there in a learning resource.**

   (A) Clarity (B) Ambiguity

   (c) Long Life (D) Context

7. **The ability to make a realistic analysis of what one is capable of doing and what one is not capable of doing before making a decision.**

   (A) Self-knowledge (B) Emotional Stability

   (C) Logical thinking (D) Rationality

8. **Inclusive, learner-friendly classroom is based on the following aspects.**

   (I) Friendly and warm relationship.

   (II) Given prominence to children's experiences

   (III) Didactic transaction

   (IV) Authentic assessment

   of these

   (A) I and II (B) I and III

   (c) I, II and III (D) I, II and IV



institutes.aglasem.com

aglasem.com

**9. "Flexibility' means**

A) the ability to think without being influenced by the views of others

B) The ability to generate fluently many ideas about a situation without any discontinuity of thoughts

C) The ability to shift perspectives while thinking and generate as many ideas as possible.

D) The ability to think in different ways on one issue.

**10. The following is not the Component of constructivist Pedagogy**

A) Flexibility

B) Openness

C) Creative thinking

D) No space for making mistakes

## Part - II

**Answer any five of the following questions, each answer not exceeding half a page.** $2 \times 5 = 10$

**11. State two common features of school as an organization.**

**12. List out two basic tenets of reflective teaching.**

**13. Briefly explain the concept of 'Learning without Burden' of Yashpal committee.**

**14. Language shapes cognitive development. Justify the statement.**

**15. List out four characteristics of creative thinker.**

**16. Write four oral assessment tools that your have used during internship.**



institutes.aglasem.com

aglasem.com

17. State four important resources that could be used for pair work.

18. Mention two suitable components of effective communication.

## Part - III

There is an alternate question for each of the following. Answer either (a) or (b) of them. Each answer not exceeding one page.

$5 \times 8 = 40$

19. (a) How do you make use of scaffolding in different ways during classroom transaction ?

OR

(b) What are the stratergies that you would adapt to become a versatile teacher ?

20. (a) State the differences between child centered pedagogy and Traditional pedagogy.

OR

(b) State five suitable aspects of critical pedagogy.

21. (a) "The school achieves its purpose though the creation of structures and processes". Analyse the statement.

OR

(b) 'There is a need to organize people and materials to ensure that plans are implemented as envisaged' Analyse.

22. (a) Explain the processes with examples included in Robert Gagne's Instructional Design.

OR

(b) Briefly explain the basic principles, guiding classroom transactions offered by the position paper.



institutes.aglasem.com

aglasem.com

23. (a) **Prepare a lesson plan related to 'Explore' and 'Explain' phases of 5 'E' Model.**

OR

(b) **Choose and design an Instructional Event from a lesson plan you have prepared.**

24. (a) **Explain with examples how resources are tools for the development of art and aesthetic sensibilities among students.**

OR

(b) **How do you make use of human resources to facilitate learning in children ?**

25. (a) **Mention the virtues that need to be possessed by critical thinkers.**

OR

(b) **State five tips that could be given to students to enhance self-awareness.**

26. (a) **Briefly explain any five components of skill of coping with stress.**

Or

(b) **Briefly explain the techniques that you could use to solve the problems of day today life.**



institutes.aglasem.com

aglasem.com

DO NOT WRITE ANYTHING HERE



institutes.aglasem.com

aglasem.com

# Answer Key

institutes.aglasem.com

aglasem.com

# ಮಾದರಿ ಉತ್ತರಗಳು
# MODEL ANSWERS

**ಸಂಕೇತ ಸಂಖ್ಯೆ : 442-EK**

**Code No. : 442-EK**

## ಡಿ.ಎಲ್.ಇಡಿ. ದ್ವಿತೀಯ ವರ್ಷ
## D.El.Ed. SECOND YEAR
## ಶಿಕ್ಷಣ
## EDUCATION
## ರೂಢಿಯಾಗಿ ಶಿಕ್ಷಣ
## EDUCATION AS PRACTICE

**(ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮ)**

**(Kannada & English Medium)**

ದಿನಾಂಕ : 12. 07. 2022 ] [ ಗರಿಷ್ಠ ಅಂಕಗಳು : 60

Date : 12. 07. 2022 ] [ Max. Marks : 60

**(ಕನ್ನಡ ಮಾಧ್ಯಮ)**

### ಭಾಗ – I

**ಬಹು-ಆಯ್ಕೆಯ ಉತ್ತರಗಳು : (ಪ್ರತಿಯೊಂದು ಸರಿ ಉತ್ತರಕ್ಕೆ ಒಂದೊಂದು ಅಂಕದಂತೆ)**

**1 × 10 = 10**

1. (B) ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಕ್ರಿಯೆಗಳಿಗೆ ಪ್ರಾಮುಖ್ಯತೆ ನೀಡುತ್ತದೆ
2. (A) ತಾತ್ಕಾಲಿಕವಾದದ್ದು
3. (C) ಎಲ್ಲಾ ಭಾಗೀದಾರರು
4. (C) ಮೌಲ್ಯಾಂಕನವು ಪರೀಕ್ಷೆ ಮತ್ತು ಸರಿಯಾದ ಉತ್ತರಗಳ ಮೂಲಕ ಮಾತ್ರ ನಡೆಯುತ್ತದೆ
5. (A) ರಾಬರ್ಟ್ ಗ್ಯಾನೆ
6. (B) ಮಕ್ಕಳ ವೈವಿಧ್ಯಮಯ ಅಗತ್ಯಗಳ ಅನುಸಾರ ಪಾಠಯೋಜನೆಗೆ ಸಂಬಂಧಿಸಿದೆ
7. (D) ಕಲಿಕಾ ಪ್ರಕ್ರಿಯೆಯ ಎಲ್ಲಾ ಹಂತಗಳಲ್ಲಿಯು ನಡೆಯುತ್ತದೆ
8. (D) I, II ಮತ್ತು III
9. (A) ಶಿಕ್ಷಣದಲ್ಲಿ ಗುಣಾತ್ಮಕತೆ ತರಲು ಅವಶ್ಯಕ
10. (D) I ಮತ್ತು II



institutes.aglasem.com

aglasem.com

## ಭಾಗ – II

**ಈ ಕೆಳಗಿನವುಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ :** **2 × 5 = 10**

11. ❖ ವೈಗಾಟ್‌ಸ್ಕಿ ಸಾಮಾಜಿಕ ಅವಕಾಶ ಪಾತ್ರ ಮತ್ತು ಕಲಿಕೆಯ ಮೇಲೆ ಗಮನಹರಿಸಿದರು.

❖ ಕಲಿಕಾರ್ಥಿ ಮತ್ತು ಇತರರ ನಡುವೆ ಕಲಿಕೆ ಮತ್ತು ಸಮಸ್ಯೆ ಪರಿಹರಿಸುವಿಕೆ ಆಗುವುದರಿಂದ ಅವುಗಳಿಗೆ ವೈಗಾಟ್‌ಸ್ಕಿ ಮಹತ್ವ ನೀಡಿದರು.

❖ ಆಲೋಚಿಸುವ ಮತ್ತು ತಾರ್ಕಿಕ ಸಾಮರ್ಥ್ಯವು ಮೂಲಭೂತವಾಗಿ ಸಾಮಾಜಿಕ ಪ್ರಕ್ರಿಯೆಯ ಫಲವೆಂದು ನಂಬಿದ್ದರು.

❖ ಸಮಯ ಬದಲಾದಂತೆ, ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ನಮ್ಮ ಸಾಮಾರ್ಥ್ಯಗಳು ಬದಲಾಗುತ್ತವೆ.

❖ ಮಗು ಇತರರೊಂದಿಗಿನ ಸಂಬಂಧದ ಮೂಲಕ ತಿಳಿಯಲು ಕಲಿಯುತ್ತದೆ.

❖ ಕಲಿಕೆಯು ಮಕ್ಕಳು, ಮತ್ತವರ ಪೋಷಕರು, ಶಿಕ್ಷಕರು, ಸ್ನೇಹಿತರು ಹಾಗೂ ಸಹಪಾಠಿಗಳ ಪರಸ್ಪರ ಅಂತರ್‌ಕ್ರಿಯೆಯ ( Mutual interaction ) ಫಲವಾಗಿದೆ.

(ಯಾವುದಾದರೂ 4 ಅಂಶಗಳು) ½ × 4 = 2

12. ***ಕಲಿಕಾ ಪ್ರಕ್ರಿಯೆಯಲ್ಲಿ ಅಟ್ಟಣೆ/ಆಸರೆ (ಸ್ಕ್ಯಾಫೋಲ್ಡಿಂಗ್) ಯನ್ನು ಬಳಸುವ ಮಾರ್ಗೋಪಾಯ:***

❖ ಮಕ್ಕಳಿಗೆ ತಮ್ಮ ಸ್ವಂತ ಅನುಭವಗಳ ಆಧಾರದ ಮೇಲೆ ಜ್ಞಾನ ಕಟ್ಟಿಕೊಳ್ಳಲು ಅವಕಾಶ ನೀಡುವುದು.

❖ ಒಂದು ನಿಯೋಜಿತ ಕಾರ್ಯವನ್ನು ನಿರ್ವಹಿಸಲು ಉದಾಹರಣೆ / ಮಾರ್ಗದರ್ಶನ ಮಾಡುವುದು.

❖ ಸಮಸ್ಯೆ ಪರಿಹಾರಗಳಿಗೆ ಮಸ್ತಿಷ್ಕ ಮಂಥನ ಬಳಸುವುದು.

❖ ಜ್ಞಾಪನ ತಂತ್ರಗಳನ್ನು ತಿಳಿಸುವುದು.

❖ ಊಹೆ, ನಿರೀಕ್ಷೆಗಳಿಗೆ ಅವಕಾಶ ನೀಡುವುದು

❖ ಸಮಸ್ಯೆ ಪರಿಹಾರಕ್ಕೆ ಸುಳಿವು, ಸೂಚನೆಗಳನ್ನು ನೀಡುವುದು.

❖ ಮಕ್ಕಳಿಗೆ ಮುಂದುವರಿಯಲು ಭಾಗಶಃ ಪರಿಹಾರಿಸಿದ ಸಮಸ್ಯೆ / ಉದಾರಣೆಗಳನ್ನು ನೀಡುವುದು.

❖ ತಪಶೀಲು ಪಟ್ಟಿಯನ್ನು ಸಾಂದರ್ಭಿಕವಾಗಿ ಬಳಸಲು ಸಲಹೆ ನೀಡುವುದು.

(ಮೇಲಿನ ಯಾವುದಾದರೂ 4 ಅಂಶಗಳ ಸಂಕ್ಷಿಪ್ತ ವಿವರಣೆ) ½ × 4 = 2



institutes.aglasem.com

aglasem.com

13. ***ತರಗತಿಯ ನಿರ್ವಹಣೆಯ 'ವರ್ತನೆ ಮಾರ್ಪಡಿಸುವಿಕೆ'ಯ ಸಿದ್ಧಾಂತ :***

- ❖ ಈ ಸಿದ್ಧಾಂತವು ಬಿ.ಎಫ್. ಸ್ಕಿನ್ನರ್‌ರವರ ಕಾರ್ಯವನ್ನು ಆಧರಿಸಿದೆ.
- ❖ ಬಹುಮಾನ ಮತ್ತು ಶಿಕ್ಷೆಯ ವ್ಯವಸ್ಥೆಯನ್ನು ಆಧರಿಸಿ ಜನರ ವರ್ತನೆಯನ್ನು ಬದಲಾಯಿಸಲು ಸಾಧ್ಯವಿದೆ.
- ❖ ಅಪೇಕ್ಷಿತ ವರ್ತನೆಗಳನ್ನು ಹೊಗಳಿಕೆ, ಬಹುಮಾನ, ನಸುನಗುವ ಆಟಿಕೆಗಳ ಮೂಲಕ ಉತ್ತೇಜಿಸಬಹುದು.
- ❖ ಕಾರ್ಯವಿಧಾನಗಳನ್ನು ಪಾಲಿಸದಿದ್ದರೆ ಶಿಕ್ಷೆ–ಭೌತಿಕ, ಹೆಚ್ಚು–ಬರವಣಿಗೆ ಕಾರ್ಯ, ವಿಶೇಷ ಸೌಕರ್ಯಗಳನ್ನು ಹಿಂಪಡೆಯುವುದು ಮುಂತಾದವು ಆಗಿರಬಹುದು.
- ❖ ಮನುಷ್ಯರ ಬಾಹ್ಯ ಉದ್ದೀಪಕಗಳಿಗೆ ಪ್ರತಿಕ್ರಿಯಿಸುತ್ತಾರೆ ಮತ್ತು ಅಭಿಪ್ರೇರಣೆ ಹೆಚ್ಚಾಗಿ ಬಾಹ್ಯವಾಗಿರುತ್ತದೆ. ಈ ಸಿದ್ಧಾಂತವನ್ನು ಅಂಗೀಕರಿಸುವ ಶಿಕ್ಷಕರು, ತೊಂದರೆ (ಗಲಾಟೆ) ಇದ್ದಲ್ಲಿ ತಮ್ಮ ಮಧ್ಯವರ್ತಿ ಕ್ರಮಗಳನ್ನು ಈ ನಂಬಿಕೆಗಳ ಆಧಾರದ ಮೇಲೆಯೇ ನಿಂತು ಕಾರ್ಯ ವಿಧಾನಗಳನ್ನು ಸ್ಥಾಪಿಸುವರು.

14. ತತ್ವಜ್ಞಾನಿ ಕ್ರಿಸ್ಟೊಫರ್ ವಿನ್ಚ್ ಮತ್ತು ಸ್ಟೆನ್ ಹೌಸ್‌ರ ವ್ಯಾಖ್ಯಾನಗಳನ್ನು ಒಳಗೊಂಡಿದೆ.

***ಪಠ್ಯಕ್ರಮ :***

- ❖ ಒಂದು ನಿರ್ದಿಷ್ಟ ಶೈಕ್ಷಣಿಕ ಗುರಿಯನ್ನು ಅನುಷ್ಠಾನಗೊಳಿಸಲು ಯೋಜಿಸಿದ ಚಟುವಟಿಕೆಗಳ ಸಮೂಹ.
- ❖ ಗುರಿಗಳಿಗೆ ಪೂರಕವಾಗಿ ಜ್ಞಾನ, ಕೌಶಲಗಳು ಮತ್ತು ಮನೋಭಾವಗಳನ್ನು ಒಳಗೊಂಡಿರುತ್ತವೆ.
- ❖ ಬೋಧನಾ ವಿಧಾನಗಳು, ಕಲಿಕಾ ಸಾಮಾಗ್ರಿಗಳು ಮತ್ತು ಮೌಲ್ಯಮಾಪನ ಇವುಗಳಿಗೆ ಸಂಬಂಧಿಸಿದ ಮಾನಕಗಳ ಹೇಳಿಕೆಗಳಾಗಿವೆ.
- ❖ ಮಗುವಿನ ಕಲಿಕೆಯನ್ನು ಅನುಕೂಲಿಸುವ ಯೋಜನೆ.

***ಪಠ್ಯವಸ್ತು :***

- ❖ ಒಂದು ಪಠ್ಯವಸ್ತುವನ್ನು ಪಠ್ಯಕ್ರಮದಿಂದ ಪಡೆಯಲಾಗಿದ್ದು, ಅದು ಬೋಧಿಸಬೇಕಾದ ವಿಷಯವಸ್ತುವಿಗೆ ಹಾಗೂ ಜ್ಞಾನ, ಕೌಶಲಗಳು ಮತ್ತು ಮನೋಭಾವನೆಗಳನ್ನು ಒಟ್ಟಾಗಿ ಹಂತಕ್ಕನುಗುಣವಾಗಿನ ನಿರ್ದಿಷ್ಟ ಉದ್ದೇಶಗಳೊಂದಿಗೆ ಉದ್ದೇಶ ಪೂರ್ವಕವಾಗಿ ಬೆಳೆಸುವುದಕ್ಕೆ ಸಂಬಂಧಿಸಿವೆ.



institutes.aglasem.com
aglasem.com

15. ***ಸ್ಥಾನ ಚಿತ್ರಣ ಪತ್ರಿಕೆಯ ಪ್ರಕಾರ ತರಗತಿಯ ಸಂವಹನವನ್ನು ಮಾರ್ಗದರ್ಶಿಸುವ ಮೂಲ ತತ್ವಗಳು :***

- ❖ ಮಕ್ಕಳು ತಮ್ಮ ಜ್ಞಾನವನ್ನು ತಾವೇ ರಚಿಸಿಕೊಳ್ಳುತ್ತಾರೆ ಎಂದು ಅರ್ಥಮಾಡಿಕೊಳ್ಳುವುದು.
- ❖ ಕಲಿಕೆಯಲ್ಲಿ ಅನುಭವಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಡುವುದು.
- ❖ ಮಕ್ಕಳ ಕ್ರಿಯಾತ್ಮಕ ತೊಡಗುವಿಕೆಯನ್ನು ಖಾತರಿಪಡಿಸುವುದು.
- ❖ ವಿಧಾನಗಳು ಮತ್ತು ಸಾಮಗ್ರಿಗಳನ್ನು ಆಯ್ಕೆ ಮಾಡುವಾಗ ಮಕ್ಕಳ ವಯಸ್ಸು ಮತ್ತು ಜ್ಞಾನಾತ್ಮಕ ಮಟ್ಟಗಳನ್ನು ಪರಿಗಣಿಸುವುದು.
- ❖ ಅಶಕ್ತತೆ ಹೊಂದಿರುವ ಮಕ್ಕಳೂ ಸೇರಿದಂತೆ, ಪ್ರತಿ ಮಗುವಿನ ವೈಯಕ್ತಿಕ ಅಗತ್ಯಗಳನ್ನು ಈಡೇರಿಸುವುದು.
- ❖ ಮಕ್ಕಳ ಸಾಮಾಜಿಕ–ಆರ್ಥಿಕ ಸನ್ನಿವೇಶ ಮತ್ತು ಅನನ್ಯತೆಯನ್ನು ಗಣನೆಗೆ ತೆಗೆದುಕೊಳ್ಳುವುದು.
- ❖ ಬಹುವಿಧದ ವಿಧಾನಗಳು – ಸನ್ನಿವೇಶಗಳನ್ನು ಬಳಸುವುದು.
- ❖ ಶಿಕ್ಷಣದ ಗುರಿಗಳನ್ನು ಸಾಧಿಸಲು ವಿವಿಧ ಅನುಭವಗಳನ್ನು ಸಂಘಟಿಸುವುದು.
- ❖ ಶಿಕ್ಷಕ–ಮಗುವಿನ ಸಂಬಂಧವನ್ನು ಉತ್ತಮಪಡಿಸುವುದು.
- ❖ ಸಮುದಾಯದ ಸಹಭಾಗಿತ್ವವನ್ನು ಒದಗಿಸುವುದು.

(ಯಾವುದಾದರೂ ನಾಲ್ಕು ಅಂಶಗಳು)

16. ***ಸಂಪನ್ಮೂಲವಾಗಿ ಚಟುವಟಿಕೆಗಳನ್ನು ಕಲಿಕೆಗೆ ಪೂರಕವಾಗಿ ಬಳಸಿಕೊಳ್ಳುವಿಕೆ :***

- ❖ ಮಾತನಾಡುವುದು ಮತ್ತು ಆಲಿಸುವುದು, ಕಥೆ/ಘಟನೆಗಳನ್ನು ಹೇಳುವುದು.
- ❖ ಪರಿಶೋಧಿಸುವ ಚಟುವಟಿಕೆಗಳು : ಪ್ರಕೃತಿಯಲ್ಲಿ ನಡಿಗೆ, ಅಂತರ್ಜಾಲದಲ್ಲಿ ಹುಡುಕಾಟ, ಗ್ರಂಥಾಲಯದಲ್ಲಿ ಶೋಧನೆ ಇತ್ಯಾದಿ.
- ❖ ಅವಲೋಕನ, ಕೈತೋಟ ನಿರ್ವಹಣೆ, ಆಟಗಳು, ದೈಹಿಕ ವ್ಯಾಯಾಮ, ಚಿತ್ರ ಬಿಡಿಸುವುದು / ಪೈಂಟಿಂಗ್, ಲಿಖಿತ ಅಥವಾ ಮೌಖಿಕ ಸೂಚನೆಗಳನ್ನು ಆಧರಿಸಿದ ಕ್ರಿಯೆಗಳು, ಮಾರ್ಗದರ್ಶಿ ಗುಂಪು ಚರ್ಚೆ.
- ❖ ಇಡೀ ಗುಂಪು ಚಟುವಟಿಕೆಗಳಿಗಾಗಿರುವಂತಹವು
- ❖ ಚಿಕ್ಕ ಗುಂಪು ಚಟುವಟಿಕೆಗಳು

17. ***ವಿಮರ್ಶಾತ್ಮಕ ಚಿಂತನಾ ಕೌಶಲದ ಘಟಕಾಂಶಗಳು :***

- ❖ ವಿಶ್ಲೇಷಣಾತ್ಮಕ ಮತ್ತು ಸಂಶ್ಲೇಷಣಾತ್ಮಕ ಸಾಮರ್ಥ್ಯಗಳು
- ❖ ವಿಷಯ ನಿಷ್ಠತೆ
- ❖ ಪರಿಣಾಮಗಳನ್ನು ಊಹಿಸುವುದು
- ❖ ಬುದ್ಧಿಮತ್ತೆ
- ❖ ತಾರ್ಕಿಕ ಚಿಂತನೆ

(ಯಾವುದಾದರೂ ಎರಡು ಘಟಕಾಂಶಗಳನ್ನು ವಿವರಿಸಿ)



institutes.aglasem.com

aglasem.com

18. ***ಬುದ್ಧಿಮಂಥನಕ್ಕೆ ಆಯ್ಕೆ ಮಾಡಬಹುದಾದ ವಿಷಯಗಳು :***

- ❖ ನಕಾರಾತ್ಮಕ ಯೋಚನೆಗಳನ್ನು ಇಲ್ಲವಾಗಿಸುವ ವಿವಿಧ ವಿಧಾನಗಳಾವುವು ?
- ❖ ಗಾಂಧಿ ಜಯಂತಿಯನ್ನು ಆಚರಿಸುವ ಹೊಸ ವಿಧಾನಗಳನ್ನು ಯೋಚಿಸಿ.
- ❖ ಕುಡಿಯುವ ನೀರಿನ ಸಮಸ್ಯೆಗಳನ್ನು ನಿಭಾಯಿಸುವ ಪರ್ಯಾಯ ಮಾರ್ಗಗಳನ್ನು ಸೂಚಿಸಿ.
- ❖ ತರಗತಿಯನ್ನು ಆಸಕ್ತಿದಾಯಕವನ್ನಾಗಿಸಬಲ್ಲ ವಿವಿಧ ಅಂಶಗಳು ಯಾವುವು ?
- ❖ ಅರಣ್ಯನಾಶವನ್ನು ತಡೆಗಟ್ಟಲು ಕೈಗೊಳ್ಳಬಹುದಾದ ಕ್ರಮಗಳು ಯಾವುವು ?
- ❖ ಶಾಲಾ ಮಕ್ಕಳಲ್ಲಿ ಧೂಮಪಾನವನ್ನು ಕಡಿಮೆಮಾಡುವ ವಿವಿಧ ವಿಧಾನಗಳನ್ನು ಪಟ್ಟಿಮಾಡಿ.
- ❖ ರಸ್ತೆಯ ಮೇಲೆ ವಾಹನಗಳನ್ನು ಕಡಿಮೆ ಮಾಡುವ ವಿವಿಧ ವಿಧಾನಗಳಾವುವು ?
- ❖ ಸಮಸ್ಯಾ ಪರಿಹಾರದಲ್ಲಿ ತಾರ್ಕಿಕ ಚಿಂತನೆಯ ಪಾತ್ರವೇನು ?

(ಮೇಲಿನ ಅಂಶಗಳಲ್ಲಿ ಅಥವಾ ಪ್ರಶಿಕ್ಷಣಾರ್ಥಿ ಚಿಂತಿಸುವ ಯಾವುದಾದರೂ ನಾಲ್ಕು)

## ಭಾಗ – III

**ಈ ಕೆಳಗಿನ ಪ್ರತಿ ಪ್ರಶ್ನೆಗೂ (a) ಅಥವಾ (b) ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿಯೊಂದು ಉತ್ತರವು ಒಂದು ಪುಟ ಮೀರದಂತೆ ಉತ್ತರಿಸಿ :** **5 × 8 = 40**

19. a) ***ವೈಗಾಟ್‌ಸ್ಕಿಯ ಸಿದ್ಧಾಂತದ ಪ್ರಮುಖ ಅಂಶಗಳು :***

I. *"ಸಾಮಾಜಿಕ ಅಂತರ್‌ಕ್ರಿಯೆಯು ಜ್ಞಾನಾತ್ಮಕ ವಿಕಸನ ಉಂಟು :*

- ❖ ಜ್ಞಾನವು ಇತರರೊಂದಿಗಿನ ಒಡನಾಟದಿಂದ ರಚಿಸಲ್ಪಡುತ್ತದೆ.
- ❖ ಜನರ ನಡುವೆ ಹೊಸ ಜ್ಞಾನವು ಮೊದಲು ಸೃಷ್ಟಿಸಲ್ಪಡುತ್ತದೆ. ಆ ನಂತರ ಅಂತರ್ಗತವಾಗುತ್ತದೆ.

II. ಸಂಸ್ಕೃತಿಯು ಜ್ಞಾನಾತ್ಮಕ ವಿಕಸನವನ್ನು ಪ್ರಭಾವಿಸುತ್ತದೆ. ವ್ಯಕ್ತಿಯಿಂದ ಸಂಸ್ಕೃತಿಯನ್ನು ಬೇರ್ಪಡಿಸಲು ಸಾಧ್ಯವಿಲ್ಲ.

- ❖ ಸಂಸ್ಕೃತಿಯ ಅಂಶಗಳಾದ ಮೌಲ್ಯಗಳು, ಸಾಧನಗಳು, ಸಂಪನ್ಮೂಲಗಳು, ಭಾಷೆ, ಸಂಕೇತ ಮತ್ತು ಸಂಜ್ಞೆ ಪದ್ಧತಿಗಳನ್ನು ಮಗು ಕಲಿಯುತ್ತದೆ.
- ❖ ಸಂಸ್ಕೃತಿಯೊಳಗೆ ಜ್ಞಾನವಿರುತ್ತದೆ. ಸಂಸ್ಕೃತಿಯ ಸದಸ್ಯರ ಸಹಯೋಗದಿಂದ ಜ್ಞಾನ ಹಂಚಲ್ಪಡುತ್ತದೆ.
- ❖ ಮಗುವಿನ ವಿಕಸನವು ಸಾಮಾಜಿಕ–ಸಾಂಸ್ಕೃತಿಕ ಮಧ್ಯಸ್ಥಿಕೆಯಿಂದಾದ ಪ್ರಕ್ರಿಯೆ.



institutes.aglasem.com
aglasem.com

III. ***ಭಾಷೆ ಜ್ಞಾನಾತ್ಮಕ ವಿಕಾಸವನ್ನು ರೂಪಿಸುತ್ತದೆ :***

- ❖ ಭಾಷೆಯು ಒಂದು ಮಾನಸಿಕ ಸಾಧನವಾಗಿದ್ದು, ಉನ್ನತ ಮಾನಸಿಕ ಕಾರ್ಯಗಳನ್ನು ಮಗು ಕಲಿಯಲು ಮತ್ತು ಗಳಿಸಲು ಸಾಧ್ಯವಾಗಿಸುವ ಸಂಕೇತ ಪದ್ಧತಿಯನ್ನು ಹೊಂದಿದೆ.
- ❖ ಭಾಷೆಯು ಸಂಸ್ಕೃತಿ ಮತ್ತು ಜ್ಞಾನವನ್ನು ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಸಾಗಿಸುತ್ತದೆ.
- ❖ ಭಾಷೆಯು ಜ್ಞಾನವನ್ನು ಪ್ರಸಾರ ಮಾಡಲು ಬಳಸುವ ಅತ್ಯಂತ ಮಹತ್ವದ ಸಾಧನೆ.
- ❖ ಭಾಷೆಯು ಚಿಂತನೆಗಳನ್ನು ರೂಪಿಸುತ್ತದೆ ಹಾಗೂ ಗುರುತಿಸಲು ಗ್ರಹಿಸಲು ಮತ್ತು ಸಮಸ್ಯೆಗಳನ್ನು ಪರಿಹರಿಸಲು ಬಳಸಲಾಗುತ್ತದೆ. $1 + 2 + 2 = 5$

***ಅಥವಾ***

b) ***ಚಟುವಟಿಕೆಯಾಧಾರಿತ ಕಲಿಕಾ ಪದ್ಧತಿಯ ನಿಹಿತಾರ್ಥಗಳು :***

- ❖ ತರಗತಿಯು ಹೆಚ್ಚು 'ಹ್ಯಾಂಡ್ಸ್-ಆನ್' ಮತ್ತು 'ಮೈಂಡ್ಸ್ ಆನ್' ಕಲಿಕೆಗೆ ಸ್ಥಳಾವಕಾಶ ಒದಗಿಸಬೇಕು.
- ❖ ಮಕ್ಕಳು ಕುತೂಹಲಿಗಳಾಗುವಂತೆ ಮಾಡುವುದು :

  ಪರಿಸರ ಅಧ್ಯಯನ ತರಗತಿಯ ಜೈವಿಕ ವಸ್ತುಗಳು, ಅಜೈವಿಕ ವಸ್ತುಗಳು, ಸುತ್ತಲಿನ ಘಟನೆಗಳ ಬಗ್ಗೆ ಕೂತೂಹಲ ಮೂಡಿಸುವುದು.
- ❖ ನೇರ / ಪ್ರತ್ಯಕ್ಷ ಅನುಭವದತ್ತ ಗಮನವಹಿಸುವುದು :

  ಸುತ್ತಮುತ್ತಲಿನ ಪ್ರಪಂಚದ ಆಗುಹೋಗುಗಳನ್ನು ಗಮನಿಸಿ ಅನ್ವೇಷಿಸಲು ಸಾಕಷ್ಟು ಅವಕಾಶಗಳನ್ನು ಹೊಂದಿದ್ದಾರೆ.
- ❖ ಒಂದು ನಿರ್ದಿಷ್ಟ ವಿಷಯವಸ್ತುವಿನ ಕುರಿತು ಹಲವು ಬಗೆಯ ಅನುಭವಗಳನ್ನು ಒದಗಿಸುವುದು.

  *ಉದಾ. :*

  i) ಸಸ್ಯಗಳ ಜೀವನ ಚಕ್ರವನ್ನು ಕಲಿಯುವಾಗ ಸಸ್ಯಗಳನ್ನು, ಬೀಜಗಳನ್ನು ನೆಟ್ಟು ಬೆಳವಣಿಗೆ ವೀಕ್ಷಿಸಲು ಅವಕಾಶ.

  ii) ಸಸ್ಯವನ ( Nursery ) ಕ್ಕೆ ಭೇಟಿ ಕೊಡುವಂತಿರಬೇಕು.
- ❖ ಈ ಚಟುವಟಿಕೆಯಾಧಾರಿತ ವಿಧಾನ ರಚನಾವಾದಿ ತತ್ವವನ್ನು ಆಧರಿಸಿದೆ. ಎಂದರೆ ತಮ್ಮ ಜ್ಞಾನವನ್ನು ತಾವೇ ಕಟ್ಟಿಕೊಳ್ಳಲು ತಾವೇ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಅವಕಾಶ ಮಾಡಿಕೊಡುವುದು. $1 \times 5 = 5$



institutes.aglasem.com

aglasem.com

20. a) ***ದೃಷ್ಟಿಕೋನ :***

- ❖ ಪ್ರತಿ ಶಾಲೆಯು ತನ್ನದೇ ಆದ ದೃಷ್ಟಿಕೋನವನ್ನು ಹೊಂದಿದ್ದು ಅದು ಒಂದು ಐಡೆಂಟಿಟಿಯನ್ನು ಪಡೆಯಬೇಕು.
- ❖ ರಾಷ್ಟ್ರೀಯ ಶಿಕ್ಷಣ ನೀತಿ – 1986 ಮತ್ತು NCF 2005 ರಲ್ಲಿ ಹೇಳಿರುವಂತೆ ಪ್ರತಿ ಶಾಲೆಯು ಅಲ್ಲಿನ ಮಕ್ಕಳು ಹಾಗೂ ಶಾಲೆಗಾಗಿ ಆಕಾಂಕ್ಷೆಗಳನ್ನು ಹೊಂದಿರುವ ಸಮುದಾಯದಲ್ಲಿ ಇರಬೇಕು.
- ❖ ಶಾಲೆಯನ್ನು ಹೊಂದಬೇಕಾದ ಉದ್ದೇಶ, ಶಾಲೆಯ ದೃಷ್ಟಿಕೋನಕ್ಕೆ ಸಂಬಂಧಿಸಿದಂತೆ ಶಿಕ್ಷಕರ ಪಾತ್ರಗಳ ಕುರಿತು ಅವರ ದೃಷ್ಟಿಕೋನದ ಸಮನ್ವಯವು ಪ್ರತಿ ಮಗುವಿಗೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನಿರಂತರವಾಗಿ ಒದಗಿಸಲು ಪ್ರಮುಖವಾದುದು.
- ❖ ಹಂಚಿಕೆ ದೃಷ್ಟಿಯತ್ತ ಸಾಗಲು ಸಂಬಂಧಿಸಿದ ಭಾಗೀದಾರರಲ್ಲಿ ಶಾಲೆಯ ಉದ್ದೇಶ, ಮಕ್ಕಳ ಕಲಿಕೆ ಮುಂತಾದ ಅಂಶಗಳ ಕುರಿತ ನಿರಂತರ ಸಂವಾದ ಅಗತ್ಯವಿದೆ.
- ❖ ದೃಷ್ಟಿಕೋನದ ಪ್ರಕ್ರಿಯೆಯನ್ನು ಕಾರ್ಯಚಟುವಟಿಕೆಯ ಒಂದು ಹಂಚಿಕೆಯಾದ ಉದ್ದೇಶ ಎಂತಲೂ ಅರ್ಥಮಾಡಿಕೊಳ್ಳಬಹುದು.
- ❖ ಶಾಲೆಯು ಒಂದು ಸಮುದಾಯವಾಗಬೇಕಾದರೆ, ಅಲ್ಲಿನ ಸದಸ್ಯರು ಪರಸ್ಪರ ಕಾಳಜಿ ಹೊಂದಿರಬೇಕು.
- ❖ ಉದ್ದೇಶದ ಸ್ಪಷ್ಟತೆ ಇದ್ದಾಗ, ಆ ಪ್ರಕ್ರಿಯೆ ಪೂರ್ಣಮಾಡಲು ಸುಲಭವಾಗುತ್ತದೆ.

***ಮೇಲ್ವಿಚಾರಣೆ :***

- ❖ ಯೋಜನೆಗಳ ಯಶಸ್ವಿ ಅನುಷ್ಠಾನಕ್ಕಾಗಿ ಜಾಗೃತ ಮೇಲ್ವಿಚಾರಣೆಯ ಅವಶ್ಯಕತೆಯಿದೆ.
- ❖ ಪ್ರಕ್ರಿಯೆ / ಯೋಜನೆಯನ್ನು ಅನುಷ್ಠಾನಗೊಳಿಸುವ ವ್ಯಕ್ತಿಗಳಿಗೆ ಅಗತ್ಯವಾದ ನೆರವನ್ನು ಕಂಡುಕೊಳ್ಳುವುದಾಗಿದೆ
- ❖ ನ್ಯೂನ ಭಾವನೆಗಳನ್ನು ಪುಷ್ಟೀಕರಿಸುವುದಕ್ಕಿಂತ, ಅಗತ್ಯವಿದ್ದಾಗ ಗುರುತಿಸಿ ನೆರವು ಒದಗಿಸುವುದು ಮುಖ್ಯವಾಗುತ್ತದೆ.
- ❖ ಇತರರೆಡೆಗೆ ಕಾಳಜಿ, ಸಮುದಾಯದೊಳಗೆ ಮಾನವೀಯತೆಯನ್ನು ಬಲಪಡಿಸುತ್ತದೆ.

$3 \times 2 = 5$

***ಅಥವಾ***



institutes.aglasem.com
aglasem.com

b) ***ಒಂದು ಸಂಸ್ಥೆಯ ಯಶಸ್ವಿ ಕಾರ್ಯನಿರ್ವಹಣೆಯಲ್ಲಿ ಸಿಬ್ಬಂದಿಗಳ ಪಾತ್ರ :***

- ಶಿಕ್ಷಕರು ಶಾಲಾ ಪ್ರಕ್ರಿಯೆಯಲ್ಲಿ ಅತ್ಯಂತ ಪ್ರಮುಖರು.
- ನಿರಂತರ ವೃತ್ತಿಪರ ಬೆಳವಣಿಗೆ ಅವಕಾಶವನ್ನು ಒದಗಿಸಬೇಕು.
- ಸ್ವಯಂ ಕಲಿಕೆ, ಸಹೋದ್ಯೋಗಿಯೊಂದಿಗಿನ ಚರ್ಚೆ, ಕಲಿಕಾರ್ಥಿಗಳ ಸಮುದಾಯದ ಭಾಗವಾಗಿ, ಕ್ರಿಯಾ ಸಂಶೋಧನೆ, ಸಹಯೋಗದ ಸಂಶೋಧನೆ ಸೇವಾನಿರತ ತರಬೇತಿ ಮುಂತಾದವುಗಳ ಮುಖಾಂತರ ವೃತ್ತಿಪರ ಬೆಳವಣಿಗೆಗೆ ಆಗಬಹುದು.
- ಶಾಲೆಯೊಳಗೆ ಇದು ಸಹದ್ಯೋಗಿಗಳ ತರಗತಿ ವೀಕ್ಷಣೆ, ಹಿಮ್ಮಾಹಿತಿ ನೀಡುವಿಕೆ / ಪಡೆಯುವಿಕೆ, ಸಾಮೂಹಿಕ ಸ್ವಾವಲೋಕನ ಚಟುವಟಿಕೆಗಳು, ಸಹ-ಬೋಧನೆ, ಹಿರಿಯ ಶಿಕ್ಷಕರಿಂದ ಸಹಾಯ.
- ಸಿಬ್ಬಂದಿಗಳಲ್ಲಿ ಸಹೋದ್ಯೋಗಿತ್ವ ಎನ್ನುವುದು ಅವರ ವೃತ್ತಿಪರ ವಿಕಾಸ ಹಾಗೆಯೇ ಶಾಲೆಯ ಅಭಿವೃದ್ಧಿಗೆ ಅತ್ಯಂತ ಪ್ರಮುಖವಾದುದು.

***ಒಂದು ಸಂಸ್ಥೆಯ ಯಶಸ್ವಿ ಕಾರ್ಯನಿರ್ವಹಣೆಯಲ್ಲಿ ಸಂಪನ್ಮೂಲಗಳ ಪಾತ್ರ :***

- ಶಾಲೆಯು ತನ್ನ ದೂರದೃಷ್ಟಿಯನ್ನು ಸಾಧಿಸಲು ಸಂಪನ್ಮೂಲಗಳು ಅಗತ್ಯ.
- ಮೂಲಭೂತ ಸೌಕರ್ಯ ಮಕ್ಕಳ ಅಗತ್ಯಗಳು, ಬೋಧನಾ-ಕಲಿಕಾ ಸಾಮಾಗ್ರಿಗಳ ತಯಾರಿಕೆ ಸರ್ಕಾರ ಸಂಪನ್ಮೂಲಗಳನ್ನು ಒದಗಿಸುತ್ತದೆ.
- ಹೆಚ್ಚಿನ ಸಂಪನ್ಮೂಲಗಳಿಗೆ ಸ್ಥಳೀಯವಾಗಿ ಪೂರೈಸಿಕೊಳ್ಳಲು ಸಂಪನ್ಮೂಲಗಳನ್ನು ಸಂಗ್ರಹಿಸಬಹುದಾಗಿದೆ.
- ಸಮುದಾಯದಿಂದ, ಪಂಚಾಯತ್‌ರಾಜ್ ಸಂಸ್ಥೆಗಳಿಂದ, ಸರ್ಕಾರೇತರ ಸಂಸ್ಥೆಗಳಿಂದ ಸಂಗ್ರಹಿಸಬಹುದಾಗಿದೆ.
- ಶಾಲೆಗಳು ಹಣಕಾಸನ್ನು ನ್ಯಾಯಯುತ ಹಾಗೂ ಪಾರದರ್ಶಕವಾಗಿ ನಿರ್ವಹಿಸಬೇಕು.
- ಹಣಕಾಸನ್ನು ವೆಚ್ಚಮಾಡುವ ನಿರ್ಧಾರಗಳು ಶಿಕ್ಷಣದ ದೂರದೃಷ್ಟಿ ಮತ್ತು ಮೌಲ್ಯಗಳಿಂದ ಕೂಡಿದ ಆದ್ಯತೆಗಳನ್ನು ಆಧರಿಸಿರಬೇಕು.
- ಶಾಲೆಯ ಎಲ್ಲಾ ಸದಸ್ಯರು ಹಾಗೂ ಸಮುದಾಯದ ಜನ ಶಾಲೆಯನ್ನು ರಕ್ಷಿಸಿ ನಿರ್ವಹಿಸುವ ಜವಾಬ್ದಾರಿಯನ್ನು ಹೊಂದಿದ್ದಾರೆ. $2\frac{1}{2} + 2\frac{1}{2} = 5$



institutes.aglasem.com

aglasem.com

21. a) ***ಸಾಂಪ್ರದಾಯಿಕ ತರಗತಿ ಮತ್ತು ಒಳಗೊಳ್ಳುವ ಕಲಿಕಾ ಸ್ನೇಹಿ ತರಗತಿಗಳ ನಡುವಿನ ವ್ಯತ್ಯಾಸಗಳು :***

| | ***ಸಾಂಪ್ರದಾಯಿಕ ತರಗತಿ*** | ***ಒಳಗೊಳ್ಳುವ, ಕಲಿಕಾ–ಸ್ನೇಹಿ ತರಗತಿ*** |
|---|---|---|
| ಸಂಬಂಧ (ಒಡನಾಟ) | ನಿರ್ದಿಷ್ಟ ದೂರದ | ಸ್ನೇಹ–ಸೌಹಾರ್ದಯುತ |
| ಕುಳಿತುಕೊಳ್ಳುವ ವ್ಯವಸ್ಥೆ | ಪ್ರತಿ ತರಗತಿಯಲ್ಲೂ ಏಕ ರೀತಿಯ ಆಸನ ವ್ಯವಸ್ಥೆ | ವಿವಿಧ ರೀತಿಯಲ್ಲಿನ ಆಸನ ವ್ಯವಸ್ಥೆ. ಅಂದರೆ ನೆಲದ ಮೇಲೆ ಎರಡು ಗುಂಪುಗಳಲ್ಲಿ ಹೆಣ್ಣು–ಗಂಡು ಮಕ್ಕಳು ಒಟ್ಟಾಗಿ ಕುಳಿತುಕೊಳ್ಳಲು ವ್ಯವಸ್ಥೆ ಅಥವಾ ಮೇಜುಗಳ ಮೇಲೆ ಕುಳಿತುಕೊಳ್ಳಲು ವ್ಯವಸ್ಥೆ. |
| ಕಲಿಕಾ ಸಾಮಗ್ರಿಗಳು | ಪಠ್ಯಪುಸ್ತಕ, ಅಭ್ಯಾಸ ಪುಸ್ತಕ, ಶಿಕ್ಷಕರಿಗೆ ಸೀಮೆಸುಣ ಫಲಕ | ಎಲ್ಲಾ ವಿಷಯಗಳಿಗೂ ವಿವಿಧ ಬಗೆಯ ಸಾಮಗ್ರಿಗಳು.<br>ಉದಾ. : ವೃತ್ತಪತ್ರಿಕೆಗಳಿಂದ ಮಾಡಿದ ಗಣಿತ ಸಾಮಗ್ರಿಗಳು ಅಥವಾ ಭಾಷಾ ತರಗತಿಗೆ ಭಿತ್ತಿಪತ್ರ ಮತ್ತು ಸೂತ್ರದ ಗೊಂಬೆಗಳು. |
| ತರಗತಿ ಸಂವಹನ | ಉಪದೇಶಾತ್ಮಕ ಮತ್ತು ಶಿಕ್ಷಕ ನಿರ್ದೇಶಿತ. ಶಿಕ್ಷಕರು ಹೇಳುತ್ತಾರೆ ಹಾಗೂ ಮಕ್ಕಳು ಪುನರುಚ್ಚರಿಸುತ್ತಾರೆ. ಪ್ರಶ್ನೆ ಕೇಳಿದಾಗ ಉತ್ತರಿಸುತ್ತಾರೆ. ಮಕ್ಕಳು ಬೇಸರಗೊಂಡು ನಿರಾಸಕ್ತರಾಗುತ್ತಾರೆ. | ಕ್ರಿಯಾಶೀಲ, ಮಕ್ಕಳು ಮಾನಸಿಕ–ಶಾರೀರಕವಾಗಿ ತೊಡಗುವಂತೆ ಮಾಡುತ್ತದೆ. ಮಕ್ಕಳ ಅನುಭವಗಳಿಗೆ ಹೆಚ್ಚು ಪ್ರಾಧಾನ್ಯತೆ. ಮಕ್ಕಳು ತಮ್ಮ ಕಲಿಕೆಯಲ್ಲಿ ಉತ್ಸಾಹಿ ಪಾಲುದಾರರು. |
| ಮೌಲ್ಯಾಂಕನ | ಪ್ರಮಾಣೀಕೃತ ಬರವಣಿಗೆ ಪರೀಕ್ಷೆಗಳು | ನೈಜ ಮೌಲ್ಯಾಂಕನ ವೀಕ್ಷಣೆಗಳು, ಕಾಲಾವಧಿಯಲ್ಲಿ ಮಕ್ಕಳು ಮಾಡಿದ ಕಾರ್ಯಗಳ ನಮೂನೆ (ಮಾದರಿ)ಗಳು.<br>ಉದಾ. : ಕಾರ್ಯ ಸಂಪುಟಗಳು. |

***ಅಥವಾ***

b) ***ಬೋಧನಾ ವಿನ್ಯಾಸದ ಜನಪ್ರಿಯ ಮಾದರಿಯು ಈ ಕೆಳಗಿನ ಪ್ರಕ್ರಿಯೆಗಳನ್ನು ಒಳಗೊಂಡಿದೆ :***

- ವಿಶ್ಲೇಷಣೆ *:* ಬೋಧನಾ ಗುರಿಗಳು ಮತ್ತು ಉದ್ದೇಶಗಳನ್ನು ವ್ಯಾಖ್ಯಾನಿಸಲಾಗಿರುತ್ತದೆ. ಕಲಿಕಾ ಪರಿಸರವನ್ನು ಗುರುತಿಸಲಾಗಿರುತ್ತದೆ. ಶಿಕ್ಷಣ ಪದ್ಧತಿಗಳನ್ನು ಗಣನೆಗೆ ತೆಗೆದುಕೊಂಡು, ಕಾಲರೇಖೆಯನ್ನು ಯೋಜಿಸಲಾಗಿರುತ್ತದೆ.
- ವಿನ್ಯಾಸ ( Design ) *:* ವಿಷಯವಸ್ತುವಿನ ವಿಶ್ಲೇಷಣೆಯನ್ನು ತಂತ್ರಗಳು, ಸಂಪನ್ಮೂಲಗಳು ಹಾಗೂ ಮೌಲ್ಯಾಂಕನ ಸಾಧನಗಳನ್ನು ಒಳಗೊಂಡಿರುತ್ತದೆ.



institutes.aglasem.com
aglasem.com

- ❖ ಅಭಿವೃದ್ಧಿ : ವಿನ್ಯಾಸ ಪ್ರಕ್ರಿಯೆಯಲ್ಲಿ ಗುರುತಿಸಿದ ಸಂಪನ್ಮೂಲಗಳು ಮತ್ತು ಸಾಮಗ್ರಿಗಳನ್ನು ಸೃಷ್ಟಿಸುವ ಅಥವಾ ಸಂಗ್ರಹಿಸುವುದನ್ನು ಇದು ಒಳಗೊಂಡಿರುತ್ತದೆ.
- ❖ ಅನುಷ್ಠಾನ : ವಿನ್ಯಾಸವನ್ನು ಅನುಷ್ಠಾನಗೊಳಿಸುವುದು.
- ❖ ಮೌಲ್ಯಮಾಪನ : ಈ ಮೇಲಿನ ಪ್ರತಿ ಪ್ರಕ್ರಿಯೆಯನ್ನು ಸ್ವಾವಲೋಕನ ಮಾಡಿ, ವಿನ್ಯಾಸವನ್ನು ಪರಿಷ್ಕರಿಸುವುದು ಇಲ್ಲಿ ಅವಶ್ಯಕ ಶಿಕ್ಷಕರು ತಮ್ಮದೇ ಆದ ಆಲೋಚನೆಗಳನ್ನು ಗಮನದಲ್ಲಿರಿಸಿಕೊಂಡು ನೈಜ ಕಲಿಕಾ ಪರಿಸರವನ್ನು ಇದರಿಂದ ಸೃಷ್ಟಿಸಬಹುದು.

ಶಿಕ್ಷಕರು ತಮ್ಮದೇ ಆದ ಆಲೋಚನೆಗಳನ್ನು ಗಮನದಲ್ಲಿರಿಸಿಕೊಂಡು ನೈಜ ಕಲಿಕಾ ಪರಿಸರವನ್ನು ಇದರಿಂದ ಸೃಷ್ಟಿಸಬಹುದು. $1 \times 5 = 5$

22. a) NCF 2005 ವರ್ತನಾವಾದಿಯಿಂದ ರಚನಾವಾದಿಯತ್ತ ಶಿಕ್ಷಣ ಪದ್ಧತಿಯಲ್ಲಿನ ನೆಲೆ ಬದಲಾವಣೆಯ ಕುರಿತು ಹೇಳುತ್ತದೆ.

- ❖ ಶಿಕ್ಷಕ-ಕೇಂದ್ರಿತ ಶಿಕ್ಷಣ ಪದ್ಧತಿಯಿಂದ ಮಗು ಕೇಂದ್ರಿತ ಶಿಕ್ಷಣ ಪದ್ಧತಿಗೆ ನೆಲ ಬದಲಾಗಬೇಕಿದೆ.
- ❖ ಶಾಲಾ ಪ್ರಕ್ರಿಯೆಗಳು ಮಕ್ಕಳನ್ನು ಸಾಮಾಜೀಕರಣಗೊಳಿಸುವುದರ ಹಾಗೂ ಕಲಿಕೆಯ ಗ್ರಹಣ ಶಕ್ತಿಯ ಮೇಲೆ ಗಮನ.
- ❖ ಕ್ರಿಯಾತ್ಮಕ ಮತ್ತು ಸೃಜನಾತ್ಮಕ ಸಾಮಾರ್ಥ್ಯಗಳ ಕಡೆ ಗಮನ.
- ❖ ಕಲಿಕೆ ಕ್ರಿಯಾತ್ಮಕ ಮತ್ತು ಸಾಮಾಜಿಕವಾದುದು ಎಂಬುದರ ಮೇಲೆ ನಂಬಿಕೆ.
- ❖ ಪಠ್ಯಕ್ರಮವು ಮಕ್ಕಳ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು, ಕಾರ್ಯಚಟುವಟಿಕೆ ಮಾಡುವ, ಪ್ರಶ್ನೆಗಳನ್ನು ಕೇಳುವ, ಸಂಶೋಧನೆ ಮಾಡುವ, ಕುತೂಹಲ ಹಾಗೂ ಜ್ಞಾನದೊಂದಿಗೆ ಅನುಭವಗಳನ್ನು ಸಮೀಕರಿಸಿಕೊಳ್ಳಲು ಅವಕಾಶ.
- ❖ ಇತರರೊಂದಿಗೆ ಕಲಿಯಲು ಅವಕಾಶ.
- ❖ ತರಗತಿ ಕೋಣೆಗಳಲ್ಲಿ ಸಾಕಷ್ಟು ಸ್ಥಳಾವಕಾಶಗಳು ಇರಬೇಕು.
- ❖ ಶಿಕ್ಷಕರು ಮತ್ತು ಪರಿಸರ, ಸುಗಮಕಾರರ ಪಾತ್ರವನ್ನು ನಿರ್ವಹಿಸಬೇಕು.
- ❖ ಶಿಕ್ಷಕರ ಗಮನ ಬೋಧನಾ ಗುರಿಗಳತ್ತ ಇರುತ್ತದೆ.
- ❖ ತರಗತಿಯು ಸಾಮೂಹಿಕವಾಗಿ ಒಪ್ಪಿತವಾದ ಪ್ರಜಾಸತ್ತಾತ್ಮಕ ನಿಯಮಗಳಿಗೆ ಬದ್ಧವಾಗಿರುತ್ತದೆ.



institutes.aglasem.com

aglasem.com

- ❖ ಮಕ್ಕಳಲ್ಲಿ ಸ್ವಯಂ ಶಿಸ್ತು-ಮೌಲ್ಯ / ಹವ್ಯಾಸವನ್ನು ರೂಢಿಸುವುದು ಅತಿ ಮುಖ್ಯವಾಗುತ್ತವೆ.
- ❖ ಮಕ್ಕಳು ಸ್ವಯಂ ಆಡಳಿತ ಸಂಹಿತೆಯ ರಚನೆಯ ಪ್ರಕ್ರಿಯೆಗಳನ್ನು ಹಾಗೂ ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಯ ತೀರ್ಮಾನ ಕೈಗೊಳ್ಳಲು ಬೇಕಾದ ಕೌಶಲಗಳನ್ನು ಕಲಿಯುತ್ತಾರೆ.

(ಯಾವುದಾದರೂ 5 ಅಂಶಗಳು) $1 \times 5 = 5$

***ಅಥವಾ***

b) ***ಕಲಿಕಾರ್ಥಿ ಕೇಂದ್ರಿತ ತರಗತಿಗಳಲ್ಲಿ ಶಿಕ್ಷಕರ ಪಾತ್ರ :***

- ❖ ಬೋಧನೆ-ಕಲಿಕೆಗೆ ಹಿತಕರವಾದ ಪರಿಸರವನ್ನು ಶಿಕ್ಷಕರು ಸೃಷ್ಟಿಸಬೇಕು, ಶಿಕ್ಷಕ-ವಿದ್ಯಾರ್ಥಿಗಳ ನಡುವಿನ ಸಂವಾದ ವಿಚಾರ ವಿನಿಮಯಕ್ಕೆ ಪೂರಕವಾಗಿರಬೇಕು.
- ❖ ತರಗತಿ ಸಂವಹನ / ಅಂತರ್‌ಕ್ರಿಯೆಗಳು ಸಾಮಾಜಿಕ ನ್ಯಾಯ ಮತ್ತು ಸಮತೆಯ ತತ್ವಗಳಿಂದ ರೂಪಿತವಾಗುವಂತೆ ನೋಡಿಕೊಳ್ಳುವುದು ಶಿಕ್ಷಕರ ಜವಾಬ್ದಾರಿಯಾಗಿದೆ.
- ❖ ಮಕ್ಕಳಿಗಾಗಿ ಕಲಿಕಾ ಸನ್ನಿವೇಶಗಳನ್ನು ವಿನ್ಯಾಸಗೊಳಿಸಿ, ಅನುಕೂಲಿಸುವುದು ಶಿಕ್ಷಕರ ಪಾತ್ರವಾಗಿರಲಿದೆ.
- ❖ ಮಕ್ಕಳು ತಮ್ಮ ಅನುಭವಗಳನ್ನು ವ್ಯಕ್ತಪಡಿಸಲು, ಆ ಅನುಭವಗಳಿಂದ ಮಕ್ಕಳು ಅರ್ಥಕಂಡುಕೊಳ್ಳುವಂತೆ / ಪ್ರಕ್ರಿಯೆಗೊಳಿಸುವಂತೆ ಸಹಾಯವಾಗುವ ಶೋಧನಾ ಪ್ರಶ್ನೆಗಳನ್ನು ಕೇಳುವ ಮೂಲಕ, ಅವರಿಗೆ ಶಿಕ್ಷಕರು ಅವಕಾಶ ಒದಗಿಸಿಕೊಡಬೇಕು.
- ❖ ಮಕ್ಕಳು ತಪ್ಪುಗಳನ್ನು ಮಾಡಲು ಅನುವು ಮಾಡಿಕೊಡುವಂತಹ, ಭಯಮುಕ್ತರಾಗಿ ಕಲಿಯಲು ಸಾಧ್ಯವಾಗುವಂತಹ ಸುರಕ್ಷಿತ ಪರಿಸರವನ್ನು ಶಿಕ್ಷಕರು ನಿರ್ಮಾಣ ಮಾಡಬೇಕು. ಅಲ್ಲದೆ ಜ್ಞಾನದ ರಚನೆಯು ಸಾಮಾಜಿಕವಾಗಿ ಆಗುವುದರಿಂದ ಸಹಕಾರಿ ಕಾರ್ಯ ಮತ್ತು ಸಾಮಾಜಿಕ ಅಂತರ್-ಕ್ರಿಯೆಗೆ ಶಿಕ್ಷಕರು ಅವಕಾಶ ಮಾಡಿಕೊಡಬೇಕು.

$1 \times 5 = 5$

23. a) ***ಕಲೆ ಮತ್ತು ಸೌಂದರ್ಯ ಪ್ರಜ್ಞೆಯನ್ನು ಬೆಳೆಸಲು ಸಂಪನ್ಮೂಲಗಳನ್ನು ಸಾಧನಗಳಾಗಿ ಬಳಸಿಕೊಳ್ಳುವಿಕೆ :***

- ❖ ಯಾವುದೇ ಸಂಪನ್ಮೂಲ ಕಲಿಕಾದಾರರಲ್ಲಿ ಸೌಂದರ್ಯ ಪ್ರಜ್ಞೆ ಬೆಳೆಸುವಂತಿರಬೇಕು. ಕಲಿಕಾ ಸಂಪನ್ಮೂಲಗಳ ಮಟ್ಟಿಗೆ ಅವುಗಳ ಬಾಹ್ಯ ಪ್ರಸ್ತುತಿ ಆಕರ್ಷಕವಾಗಿರಬೇಕಾದುದು ಮುಖ್ಯ.
- ❖ ಸಂಪನ್ಮೂಲದ ಸುಸಂಗತತೆ, ಬಳಕೆಯ ಸಾಧ್ಯತೆ, ಅವುಗಳೊಂದಿಗೆ ಗುರುತಿಸಿಕೊಳ್ಳಲು ಇರುವ ಅವಕಾಶಗಳು.



institutes.aglasem.com
aglasem.com

- ❖ ಕಲಿಕಾ ಸಂಪನ್ಮೂಲಗಳು ಸಂಶೋಧನೆಗೆ ಅವಕಾಶ ಮಾಡಿಕೊಡುವಂತಿರಬೇಕು.
- ❖ ಕಲಿಕೆಯನ್ನು ಸಮಗ್ರವಾಗಿ ಕಟ್ಟಿಕೊಡುವಂತಿರಬೇಕು.
- ❖ ಸಂಪನ್ಮೂಲಗಳನ್ನು ಬಳಸುವ ರೀತಿಯೂ ಬಹಳ ಮುಖ್ಯ.
- ❖ ಸಂಪನ್ಮೂಲ ಬಳಕೆಗೆ ಸುಲಭ ಎನಿಸುವಂತಿರಬೇಕು.
- ❖ ಸಂಪನ್ಮೂಲಗಳ ಬಳಕೆಯ ಮೇಲೆ ಮಕ್ಕಳಿಗೆ ಅವರಲ್ಲಿರುವ ಸೌಂದರ್ಯ ಪ್ರಜ್ಞೆಯ ಅರಿವಾಗುತ್ತವೆ.
- ❖ ಕಲಿಕಾ ಸಂಪನ್ಮೂಲಗಳನ್ನು ಸಜ್ಜುಗೊಳಿಸಲು ಚಿತ್ರಕಲೆ, ಸಂಗೀತ, ನೃತ್ಯ, ನಾಟಕ, ಸಾಹಿತ್ಯ, ವಿವಿಧ ಕ್ರಾಫ್ಟ್‌ಗಳು ಮುಂತಾದ ಕಲಾ ಪ್ರಕಾರಗಳನ್ನು ಸಂಪನ್ಮೂಲಗಳನ್ನು ತಯಾರಿಸುವಾಗ ಬಳಸಿಕೊಳ್ಳಬೇಕು.
- ❖ ಕಲಿಕಾ ಸಂಪನ್ಮೂಲಗಳನ್ನು ಗುರುತಿಸುವಾಗ, ವಿನ್ಯಾಸಗೊಳಿಸುವಾಗ ಸೌಂದರ್ಯ ಕಾಳಜಿಗಳು ಉಪಯುಕ್ತತೆ ಅಪ್ಪತೆಯ ಕಡೆ ಗಮನ ನೀಡಬೇಕು. $1 \times 5 = 5$

***ಅಥವಾ***

b) ***ಬೋಧನೋಪಕರಣ, ಬೋಧನಾ ಕಲಿಕಾ ಸಾಮಗ್ರಿ ಹಾಗೂ ಕಲಿಕಾ ಸಂಪನ್ಮೂಲ ಗ್ರಹಿಕೆಯಲ್ಲಾದ ಬದಲಾವಣೆಗಳು :***

- ❖ ಮೂರು ಅಭಿವ್ಯಕ್ತಿಗಳು ನಮ್ಮ ದೈನಂದಿನ ಮಾತುಕತೆಯಲ್ಲಿ ಬರುತ್ತವೆ. ಇವುಗಳ ಬಳಕೆಯಲ್ಲಿಯೇ ನಮ್ಮ ತಾತ್ವಿಕ ನಿಲುವುಗಳು ಗೋಚರಿಸುತ್ತವೆ.
- ❖ ಬೋಧನೆ ಎಂದಾಗ ಮುಖ್ಯವಾಗುವುದು ಬೋಧಕ, ಶಿಕ್ಷಕ ಕೇಂದ್ರಿತ ತರಗತಿಯಲ್ಲಿ ಬೋಧನೋಪಕರಣಗಳಿದ್ದವು. ಅವು ಶಿಕ್ಷಕರ ಮಾಹಿತಿ ದಾಟಿಸುವ ಕಾಯಕದಲ್ಲಿ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದವು.
- ❖ ಶೈಕ್ಷಣಿಕ ಚಿಂತನೆಗಳು ಬದಲಾದಂತೆ ತರಗತಿಯ ಕೇಂದ್ರ ಮಗು ಎಂಬ ಚಿಂತನೆ ಒತ್ತು ಪಡೆಯಿತು ಆಗ ಬೋಧನಾ ಕಲಿಕಾ ಸಾಮಗ್ರಿ ಎಂಬ ಅಭಿವ್ಯಕ್ತಿ ಬಳಕೆಗೆ ಬಂತು. ಕಲಿಕಾದಾರರ ಪ್ರಾಮುಖ್ಯತೆ ಇಲ್ಲಿಂದ ಬೆಳೆಯಲಾರಂಭಿಸಿತು.
- ❖ ಈಗ ಕಲಿಕಾದಾರರೇ ತರಗತಿಯ ಕೇಂದ್ರ ಬಿಂದುಗಳು, ಶಿಕ್ಷಕರು ಕಲಿಕೆಯನ್ನು ಅನುಕೂಲಿಸುವವರು. ಆದ್ದರಿಂದ ಕಲಿಕೆಗೆ ಸಹಾಯವಾಗಲು ಬಳಸುವ ಎಲ್ಲವನ್ನೂ ಕಲಿಕಾ ಸಾಮಾಗ್ರಿಗಳು ಎಂದು ಗುರುತಿಸುವ ಸಂಪ್ರದಾಯ ಬೆಳೆಯಿತು.
- ❖ ಮಕ್ಕಳು ಕಲಿಯುವುದು ಅನುಭವಕ್ಕೆ ಬರುವ ಸಂಗತಿಗಳನ್ನು.
- ❖ ಸಂಪನ್ಮೂಲಗಳು ಹೊಸ ಜ್ಞಾನದ ಶೋಧನೆಯಲ್ಲಿ ತೊಡಗಿಸಿಕೊಳ್ಳುವಂತಿರಬೇಕು.
- ❖ ವೈಜ್ಞಾನಿಕ ಚಿಂತನೆಯಲ್ಲಿ, ವೈಯಕ್ತಿಕ ಹುಡುಕಾಟದಲ್ಲಿ ತೊಡಗಿಸಿಕೊಳ್ಳಬೇಕು.

$1 \times 5 = 5$



institutes.aglasem.com

aglasem.com

24. a) ಈ ಕೆಳಗಿನ ತಾಳೆಪಟ್ಟಿ ಕಲಿಕೆಯ ಸಂಪನ್ಮೂಲಗಳ ಔಚಿತ್ಯಪೂರ್ಣ ಆಯ್ಕೆ ಕುರಿತಂತೆ ಬೋಧನೆಯ ಮೊದಲು ಹಾಗೂ ಆನಂತರ ಸ್ವಾವಲೋಕನಕ್ಕೆ ಸಹಕಾರಿಯಾಗಿದೆ. ಸಂಪನ್ಮೂಲಗಳನ್ನು ನೀಡುವಾಗ ಅಥವಾ ಬಳಸುವಾಗ ಇವುಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

